**ಅಸಲು ದಾವಾ ಸಂಖ್ಯೆ:987/2018**

**ಡಿ.ಡಬ್ಲೂ -1**

**ದಿನಾಂಕ:29-02-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ವಾದಿ ಪರ ವಕೀಲರಾದ ಶ್ರೀ ಜಿ.ಆರ್.ಎಸ್. ರವರಿಂದ:-**

**(ಸಾಕ್ಷಿಗೆ ಕನ್ನಡ ಭಾಷೆಯು ಬರದೆ ಇರುವುದರಿಂದ ಮರಾಠಿ ಭಾಷೆಯಲ್ಲಿ ಕೇಳಿದ ಪ್ರಶ್ನೆಗಳನ್ನು ಅರ್ಥೈಸಿಕೊಂಡು ಉಭಯ ಪಕ್ಷಗಾರರ ವಕೀಲರ ಉಪಸ್ಥಿತಿ ಮೇರೆಗೆ ತರ್ಜುಮೆ ಮಾಡಿ ಕನ್ನಡ ಭಾಷೆಯಲ್ಲಿ ಸಾಕ್ಷ್ಯವನ್ನು ದಾಖಲಿಸಿಕೊಳ್ಳಲಾಯಿತು . ಕನ್ನಡ ಭಾಷೆಗೆ ತರ್ಜುಮೆ ಮಾಡಿ ನೀಡಿದ ಸಾಕ್ಷ್ಯವನ್ನು ದಾಖಲಿಸಿಕೊಳ್ಳಲು ಉಭಯ ಪಕ್ಷಗಾರರ ಪರ ವಕೀಲರು ಯಾವುದೇ ತಕರಾರು ಇಲ್ಲವೆಂದು ತಿಳಿಸಿರುತ್ತಾರೆ.)**

ನಾನು ಹಾಜರುಪಡಿಸಿದ ನಿಡಿ-8 ಮತ್ತು 9 ದಾವಾ ಸ್ವತ್ತಿನ ಉತಾರಗಳು ಅಲ್ಲ ಎಂದರೆ ಸರಿ, ಸಾಕ್ಷಿ ಅವು ನನ್ನ ಸ್ವತ್ತಿನ ಉತಾರಗಳು ಎನ್ನುತ್ತಾರೆ. ನಿಡಿ-10 ದಾವಾ ಸ್ವತ್ತು ಸರ್ವೆ ನಂ.40/30 ರ ನಕಾಶೆ ಎಂದರೆ ಸರಿ. ಅದರಲ್ಲಿ ನಿಮ್ಮ ಹೆಸರು ಇರುವುದಿಲ್ಲ ಎಂದರೆ ಸರಿ , ಸಾಕ್ಷಿ ಆದರೆ ನಾನೇ ಕಬ್ಜೆಯಲ್ಲಿದ್ದೇನೆ ಎನ್ನುತ್ತಾರೆ. ನಿಮ್ಮ ಕಬ್ಜೆಯಲ್ಲಿದೆ ಎಂದು ನಿಡಿ-10 ರಲ್ಲಿ ಬರೆಯಲಾಗಿದೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಿಡಿ-15 ರಿಂದ 21 ರವರೆಗಿನ ಪೋಟೋಗಳು ನನ್ನ ಸ್ವತ್ತಿನ ಪೋಟೋಗಳು ಎಂದರೆ ಸರಿ. ನಿಡಿ-26 ಸರ್ವೆ ನಂ.40/30 ರ ಉತಾರ ದಾವಾ ಸ್ವತ್ತಿಗೆ ಸಂಬಂಧಿಸಿದ್ದಲ್ಲ ಎಂದರೆ ಸರಿ . ನಿಡಿ-28 ಮತ್ತು 29 ರ ಉತಾರಗಳಲ್ಲಿ ನಿಮ್ಮ ಹೆಸರು ದಾಖಲಾಗಿಲ್ಲ ಎಂದರೆ ಸರಿಯಲ್ಲ , ನಿಡಿ-28 ಮತ್ತು 29 ರಲ್ಲಿ ನಿಮ್ಮ ಹೆಸರು ಇಲ್ಲದಿದ್ದರೂ ಇದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ-28 ಮತ್ತು 29 ರಲ್ಲಿ ಸಾಗುವಳಿದಾರರ ಕಾಲಂ ನಲ್ಲಿ ನಿಮ್ಮ ಹೆಸರು ನಮೂದಾಗಿಲ್ಲ ಎಂದರೆ ಸರಿಯಲ್ಲ. ನಿಡಿ-28 ಮತ್ತು 29 ರ ಉತಾರದಲ್ಲಿ ಸಾಗುವಳಿದಾರರ ಕಾಲಂ ನಲ್ಲಿ ವಾದಿಯರ ಹೆಸರು ನಮೂದಾಗಿದೆ ಎಂದರೆ ಸರಿ.

**2.** ನಿಡಿ-27 ರಲ್ಲಿ ವಾದಿಯರ ಅಜ್ಜನ ಹೆಸರು ನಮೂದಾಗಿದೆ ಎಂದರೆ ಸರಿ, ಸಾಕ್ಷಿ ನನ್ನ ಅಜ್ಜನ ಹೆಸರೂ ಸಹ ನಮೂದಾಗಿದೆ ಎನ್ನುತ್ತಾರೆ. ನಿಮ್ಮ ಅಜ್ಜನ ಹೆಸರು ನಮೂದಾಗಿದೆ

ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ-30 ಡೈರಿ ಪ್ರಕಾರ ವಾದಿಯರ ಹೆಸರು ನಮೂದಾಗಿದೆ ಎಂದರೆ ಸಾಕ್ಷಿ ಅವರು ತಮ್ಮ ಹೆಸರನ್ನು ಹಚ್ಚಿಕೊಂಡಿದ್ದಾರೆ ಎನ್ನುತ್ತಾರೆ. ನಿಡಿ-31 ಡೈರಿ ಪ್ರಕಾರ ಬರ್ಮ ರವರ ಮರಣಾನಂತರ ಅವರ ಮಗಳು ಕಲ್ಲವ್ವ ರವರ ಹೆಸರು ನಮೂದಾಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರು ಹೆಸರು ಹಚ್ಚಿಕೊಂಡಿದ್ದಾರೆ, ಆದರೆ ದಾವಾ ಸ್ವತ್ತು ನಮ್ಮದು ಎನ್ನುತ್ತಾರೆ. ಡೈರಿಯನ್ನು ತಪ್ಪಾಗಿ ನಮೂದು ಮಾಡಲಾಗಿದೆ ಎಂದು ಇಲ್ಲಿಯವರೆಗೂ ನೀವು ಯಾವುದೇ ನ್ಯಾಯಾಲಯದಲ್ಲಿ ಸದರಿ ಡೈರಿಗಳನ್ನು ಪ್ರಶ್ನಿಸಿಲ್ಲ ಎಂದರೆ ಸಾಕ್ಷಿ ನಮ್ಮ ವಕೀಲರು ಹಾಕಿದ್ದಾರೆ ಎನ್ನುತ್ತಾರೆ. ಯಾವ ನ್ಯಾಯಾಲಯದಲ್ಲಿ ಪ್ರಕರಣ ಹೂಡಿದ್ದಾರೆ ಮತ್ತು ಆ ಪ್ರಕರಣಗಳ ಸಂಖ್ಯೆ ಯಾವುದು ಎಂದರೆ ಸಾಕ್ಷಿ ನಾವು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿಲ್ಲ ಎನ್ನುತ್ತಾರೆ.

**3.** ವಾದಿಯರು ನಿಮ್ಮ ಸಂಬಂಧಿಕರು ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಹಾಜರು ಮಾಡಿದ್ದೇನೆ ಎನ್ನುತ್ತಾರೆ. ದಾಖಲೆ ಹಾಜರುಪಡಿಸದೆ ಇದ್ದರೂ ಸಹ ಹಾಜರುಪಡಿಸಿದ್ದೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರ ಕುಟುಂಬಕ್ಕೂ ಹಾಗೂ ನಿಮಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಯರಿಗೆ ಮೊದಲು ಕಾಂಬ್ಳೆ ಎಂಬ ಅಡ್ಡ ಹೆಸರಿನಿಂದ ಕರೆಯುತ್ತಿದ್ದರು ಎಂದು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ವಾದಿಯರ ಅಡ್ಡ ಹೆಸರು ಮೊದಲಿನಿಂದಲೂ ದೇವರಮನಿ ಎಂದು ಇದೆ ಎಂದರೆ ಸರಿಯಲ್ಲ. ವಾದಿಯರ ಪೂರ್ವಜರು ನಿಮಗೆ ಬರೆದುಕೊಟ್ಟ ಹಕ್ಕು ಬಿಟ್ಟುಕೊಟ್ಟ ಪತ್ರ ನೊಂದಣಿಯಾಗಿದೆಯೇ ಎಂದರೆ ಸಾಕ್ಷಿ ಆಗಿದೆ ಎನ್ನುತ್ತಾರೆ. ನೊಂದಾಯಿತ ಹಕ್ಕು ಬಿಟ್ಟುಕೊಟ್ಟ ಪತ್ರವನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ವಾದಿಯರ

ಪೂರ್ವಜರು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಹಕ್ಕು ಬಿಟ್ಟುಕೊಟ್ಟ ಪತ್ರವನ್ನು ಯಾವತ್ತೂ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ . ಯಾವುದೇ ಹಕ್ಕು ಬಿಟ್ಟುಕೊಟ್ಟ ಪತ್ರವನ್ನು ಬರೆದುಕೂಡದೆ ಇದ್ದರೂ ಬರೆದುಕೊಟ್ಟಿದ್ದಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೂ ನಿಮಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ವಾದಿಯರ ದಾವಾ ಸ್ವತ್ತಿನ ಮಾಲೀಕತ್ವವನ್ನು ಪ್ರಶ್ನಿಸಿ ಇದೂವರೆಗೂ ದಾವೆ ಹೂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ದಾವಾ ಸ್ವತ್ತಿಗೂ ನಿಮಗೂ ಯಾವುದೇ ಸಂಬಂಧ ಇಲ್ಲದ ಕಾರಣ ಯಾವುದೇ ದಾವೆ ಹೂಡಿಲ್ಲ ಎಂದರೆ ಸರಿಯಲ್ಲ.

**4.** ನೀವು ಮತ್ತು ಇತರೆ ಪ್ರತಿವಾದಿಯರು ದಿನಾಂಕ 16.07.2018 ರಂದು ದಾವಾ ಸ್ವತ್ತಿಗೆ ಹೋಗಿ ವಾದಿಯರ ಕಬ್ಜೆಗೆ ಅಡಚಣೆ ಮಾಡಿದ್ದೀರಿ ಎಂದರೆ ಸರಿಯಲ್ಲ . ದಿನಾಂಕ 16.08.2018 ರಂದು ನೀವು ವಾದಿಯರಿಗೆ ಬೆದರಿಕೆ ಹಾಕಿ ಕೃಷಿ ಚಟುವಟಿಕೆಗೆ ಅಡ್ಡಿ ಪಡಿಸಿರುತ್ತೀರಿ ಎಂದರೆ ಸರಿಯಲ್ಲ. ಆದ್ದರಿಂದ ವಾದಿ ಸುರೇಶ್ ರವರು ನಿಮ್ಮ ಮತ್ತು ಇತರೆ ಪ್ರತಿವಾದಿಯರ ವಿರುದ್ಧ ಕಾಕತಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ ಎಂದರೆ ಸರಿ. ಕಾಕತಿ ಪೊಲೀಸ್ ಠಾಣೆಯವರು ನನ್ನ ವಿರುದ್ಧ ಎಫ್ .ಐ.ಆರ್. 216/2018 ನ್ನು ದಾಖಲಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಿಪಿ-4 ರಂತೆ ನಿಮ್ಮ ವಿರುದ್ಧ ಎಫ್.ಐ.ಆರ್. ದಾಖಲಾಗಿದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ . ಕಾಕತಿ ಪೊಲೀಸ್ ಠಾಣೆಯವರು ನಿಪಿ-5 ರಂತೆ ವಾದಿಯರಿಗೆ ಹಿಂಬರಹವನ್ನು ಕೊಟ್ಟು ಪ್ರಕರಣವು ಸಿವಿಲ್ ಸ್ವರೂಪದ್ದಾಗಿರುತ್ತದೆ, ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳುವಂತೆ ಹೇಳಿರುತ್ತಾರೆ ಎಂದರೆ ಸರಿ.

**5.** ವಾದಿಯರು ದಾವಾ ಸ್ವತ್ತಿನಲ್ಲಿ ಶೆಡ್ ನ್ನು ಕಟ್ಟಿದ್ದಾರೆ ಎಂದರೆ ಸಾಕ್ಷಿ ಮೊದಲು ಇರಲಿಲ್ಲ, ಈಗ 2 ವರ್ಷಗಳ ಹಿಂದೆ ಕಟ್ಟಿದ್ದಾರೆ ಎನ್ನುತ್ತಾರೆ. ಅದರಲ್ಲಿ 3 ನೇ ವಾದಿ ವಾಸಿಸುತ್ತಾರೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ಬೆಳೆದ ಕಬ್ಬನ್ನು ಮಾರ್ಕಂಡೇಯ ಶುಗರ್ ಫ್ಯಾಕ್ಟರಿಗೆ ಕಳುಹಿಸುತ್ತಾರೆ ಎಂದರೆ ಸಾಕ್ಷಿಯು ನನಗೆ ಮಾಹಿತಿ ಎನ್ನುತ್ತಾರೆ. ವಾದಿಯರು ಇಲ್ಲಿಯವರಗೊ ದಾವಾ ಸ್ವತ್ತಿನ ಮಾಲೀಕರಾಗಿ ಕಬ್ಜೆಯಲ್ಲಿದ್ದಾರೆ ಎಂದರೆ ಸಾಕ್ಷಿ ನಾವೂ ಸಹ ಮಾಲೀಕರು ಇದ್ದೇವೆ ಎನ್ನುತ್ತಾರೆ. ವಾದಿಯರಿಗೆ ಮತ್ತು ದಾವಾ ಸ್ವತ್ತಿಗೂ ಮತ್ತು ನಿಮಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**ಸಹಿ/-**

**3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**